**2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು**

**ಸತ್ರ ಮೊಕದ್ದಮೆ ನಂಃ 23/2014**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ- | ಚನ್ನಬಸಪ್ಪ | ಪಿಡಬ್ಲ್ಯೂಃ-1 |
| ತಂದೆಯ ಹೆಸರು | ಃ- | ಕನ್ನಪ್ಪ | ಸಿಡಬ್ಲ್ಯೂಃ-59 |
| ವಯಸ್ಸು | ಃ- | 33 ವರ್ಷ | |
| ಉದ್ಯೋಗ | ಃ- | ಉಪ ಆಯುಕ್ತರು,<br>ಶಿವಮೊಗ್ಗ ಮಹಾನಗರ ಪಾಲಿಕೆ | |
| ವಾಸ ಸ್ಥಳ | ಃ- | ಶಿವಮೊಗ್ಗ | |

ದಿನಾಂಕಃ-15-04-2015 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಃ ಮುಖ್ಯ ವಿಚಾರಣೆ ಪಿ.ಪಿ. ರವರಿಂದ :-**

ನಾನು ಅಕ್ಟೋಬರ್ 2013 ರಿಂದ 2014 ರ ಸೆಪ್ಟೆಂಬರ್ ವರೆಗೆ ಚಿಕ್ಕಮಗಳೂರು ಉಪವಿಭಾಗದ ದಂಡಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ.

2. ದಿಃ26.10.2013 ರಂದು ಕಡೂರು ಗ್ರಾಮಾಂತರ ಪೊಲೀಸ್ ಠಾಣೆಯಿಂದ ಇನ್ಸ್‌ಪೆಕ್ಟರ್‌ರವರು ಒಂದು ಕೋರಿಕೆ ಪತ್ರವನ್ನು ಸಲ್ಲಿಸಿದ್ದರು. ಸದರಿ ಕೋರಿಕೆ ಪತ್ರದಂತೆ ಒಂದು ಕೊಲೆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿಯು ಹೆಣವನ್ನು ಹೂತಿಟ್ಟಿದ್ದು, ಅದನ್ನು ತೋರಿಸುವುದಾಗಿ ಹೇಳಿರುವಂತೆ, ಸದರಿ ಹೆಣವನ್ನು ಹೊರತೆಗೆಯುವಂತೆ ಕೋರಿಕೆ ಸಲ್ಲಿಸಲಾಗಿತ್ತು, ಸದರಿ ಕೋರಿಕೆ ಪತ್ರವನ್ನು ಈಗ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ. ಅದರಲ್ಲಿ ನನ್ನ ಸಹಿ ಇದೆ. (ಸದರಿ ಕೋರಿಕೆ ಪತ್ರವನ್ನು ನಿಪಿ-1 ಎಂದೂ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಗುರುತಿಸಲಾಯಿತು).

3. ಅದೇ ದಿನದಂದೆ ಬೆಳಗ್ಗೆ 11 – 11ಃ30 ಸಮಯಕ್ಕೆ ಸಖರಾಯಪಟ್ಟಣ ಪೊಲೀಸ್ ಠಾಣೆಗೆ ಹೋದೆ. ಸದರಿ ಠಾಣೆಯಲ್ಲಿ 1ನೇ ಆರೋಪಿಯು ಹಾಜರಿದ್ದು, ಆತನನ್ನು ಕೇಳಿದಾಗ ಆತ ಕೊಲೆ ಮಾಡಿ ಒಂದು ಹೆಣವನ್ನು ತನ್ನ ಜಮೀನಿನಲ್ಲಿ ಹೂತಿಟ್ಟಿರುವುದಾಗಿ, ಅಲ್ಲಿಗೆ ಕರೆದುಕೊಂಡು ಹೋದರೆ ಅದನ್ನು ತೋರಿಸುವುದಾಗಿ ಹೇಳಿದ. ಅದರಂತೆ ಆತನ ಜೊತೆ ನಾವು ಲಕ್ಯಾಹೋಬಳಿ

ಪಿ.ಡಬ್ಲ್ಯೂ:-1

ಅಂಚೆಹಳ್ಳಿ, ಗ್ರಾಮದ 1ನೇ ಆರೋಪಿಯ ಜಮೀನಿನ ಹತ್ತಿರ ಕರೆದುಕೊಂಡು ಹೋದ. ಹೂತಿಟ್ಟಿದ್ದ ಹೆಣವನ್ನು ಹೊರತೆಗೆಯುವ ಸಲುವಾಗಿ ಪೊಲೀಸರಿಗೆ ಪುರಸಭೆಯಿಂದ ಕಾರ್ಮಿಕರನ್ನು ಕರೆಸಲು ತಿಳಿಸಿದ್ದೆ. ಅದರಂತೆ ಕರೆಸಿದ್ದರು. ಊರಿನ ಮುಖಂಡರು ನಮ್ಮ ಜೊತೆ ಪಂಚರಾಗಿದ್ದರು.

4. ನಂತರ ಸದರಿ ಜಾಗಕ್ಕೆ ಹೋದಾಗ 1ನೇ ಆರೋಪಿಯು ಒಂದು ಹಳ್ಳದ ಪಕ್ಕದಲ್ಲಿರುವ ದಿಣ್ಣೆಯ ಕೆಳಗೆ ಕೈ ಮಾಡಿ ತೋರಿಸಿದ. ಅದರಂತೆ ನಾವು ಪೌರಕಾರ್ಮಿಕರ ಸಹಾಯ ದಿಂದ ಶವ ಇದ್ದ ಜಾಗವನ್ನು ಅಗೆಯಲು ಹೇಳಿದೆನು. ಸುಮಾರು 3-4 ಅಡಿ ಆಳ ಅಗೆದು ನೋಡಲಾಗಿ ಅಲ್ಲಿ ಒಂದು ಗಂಡಸಿನ ಶವ ಇತ್ತು, ಸದರಿ ಶವದ ಮೈಮೇಲೆ ಕಾಚಾವನ್ನು ಹೊರತುಪಡಿಸಿ ಬೇರೆ ಬಟ್ಟೆಗಳು ಇರಲಿಲ್ಲ, ಶವದ ಬಲತೋಳಿಗೆ ಒಂದು ತಾಯತವನ್ನು ಕಟ್ಟಿದ್ದರು. ಸದರಿ ಶವವನ್ನು ಸತ್ತಿರುವ ವ್ಯಕ್ತಿಯ ಹತ್ತಿರದ ಸಂಬಂಧಿಕರು ಆತ ಹರೀಶ ಎಂದು ಆತನ ತಾಯಿ, ತಂದೆ, ಹತ್ತಿರದ ಸಂಬಂಧಿಕರು ಗುರುತಿಸಿದರು. ಒಂದು ಗುದ್ದಲಿಯಿಂದ ಸದರಿ ಜಾಗವನ್ನು ಅಗೆದು ಹೂತಿರುವುದಾಗಿ ಹೇಳಿ ಗುದ್ದಲಿಯನ್ನು ಸ್ವಲ್ಪ ದೂರದಲ್ಲಿ ಬಿಸಾಕಿರುವುದಾಗಿ ಹೇಳಿದ. ಸದರಿ ಗುದ್ದಲಿ ಹತ್ತಾರು ಹೆಜ್ಜೆಯಷ್ಟು ದೂರದಲ್ಲಿ ಇದ್ದು, ಅದನ್ನು 1ನೇ ಆರೋಪಿಯೇ ತೋರಿಸಿದ್ದು, ಅದನ್ನು ಪೊಲೀಸರು ಅಮಾನತ್ತುಪಡಿಸಿಕೊಂಡರು.

5. ಪಂಚರ ಸಮಕ್ಷಮ ನಾನು ಸದರಿ ಶವದ ಪಂಚನಾಮೆಯನ್ನು ಮಾಡಿ, ಕುಟುಂಬದವರ ಹೇಳಿಕೆಗಳನ್ನು ಮಾಡಿಕೊಂಡೆನು.

6. ಶವವನ್ನು ಹೊರತೆಗೆಯುವಾಗ ಒಂದು ಮಹಜರ್‌ನ್ನು ಬರೆದಿದ್ದು, ಅದನ್ನು ಈಗ ಗುರುತಿಸುತ್ತಿದ್ದೇನೆ. ಅದರಲ್ಲಿ ನನ್ನ ಸಹಿ ಇದೆ. (ಸಾಕ್ಷಿಯು ಗುರುತಿಸಿದ ಸದರಿ ಮಹಜರ್‌ನ್ನು ನಿಪಿ-2 ಎಂದೂ, ಅವರ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು). ನಿಪಿ-2 ನ್ನು ಸುಮಾರು ಮಧ್ಯಾಹ್ನ 2 ಗಂಟೆಯವರೆಗೆ ಮಾಡಲಾಯಿತು.

7. ನಂತರ ಗ್ರಾಮಸ್ಥರೊಂದಿಗೆ ಒಂದು ಪಂಚನಾಮೆಯನ್ನು ಸುಮಾರು 4:30 ವರೆಗೆ ಮಾಡಿದೆ. ಈಗ ಸದರಿ ಮಹಜರ್‌ನ್ನು ಗುರುತಿಸುತ್ತಿದ್ದೇನೆ. (ಸಾಕ್ಷಿಯು ಗುರುತಿಸಿದ ಸದರಿ ಶವ ಪಂಚನಾಮೆ ಸಂಬಂಧಿಕರ ಹೇಳಿಕೆಗಳನ್ನು ಒಳಗೊಂಡಿರುವಂತಹ ಮಹಜರ್‌ನ್ನು ನಿಪಿ-3 ಎಂದೂ, ಸಾಕ್ಷಿಯ ಎರಡು ಸಹಿಯನ್ನು ನಿಪಿ-3(ಎ) ಎಂದೂ, ನಿಪಿ-3(ಬಿ) ಎಂದು ಗುರುತಿಸಲಾಯಿತು).

ಸದರಿ ಶವವನ್ನು ಮರಣೋತ್ತರ ಪರೀಕ್ಷೆಯ ಸಲುವಾಗಿ ವೈದ್ಯಾಧಿಕಾರಿಗಳಿಗೆ ವಹಿಸಿಕೊಟ್ಟೆನು. ಆ ಬಗ್ಗೆ ಒಂದು ಮನವಿ ಪತ್ರವನ್ನು ನೀಡಿರುತ್ತೇನೆ.

8. ಅಮಾನತ್ತುಪಡಿಸಿಕೊಂಡಿರುವಂತಹ ಗುದ್ದಲಿ, ಕಾಚಾ ಹಾಗೂ ತಾಯತವನ್ನು ನೋಡಿದರೆ ಗುರುತಿಸುತ್ತೇನೆ. (ಈಗ ಸಾಕ್ಷಿ ಗುರುತಿಸಿದ ಸದರಿ ಗುದ್ದಲ್ಲಿ ಮು.ಮಾ.1 ಎಂದೂ, ಎರಡು ಸೀಲ್ ಆದ ಬಿಳಿ ಬ್ಯಾಗ್‌ಗಳನ್ನು ್ನ ನ್ಯಾಯಾಲಯದ ಅನುಮತಿಯ ಮೇರೆಗೆ ತೆರೆಯಲಾಯಿತು. ಅದರಲ್ಲಿ ಇದ್ದಂತಹ ಒಂದು ಕಾಚಾವನ್ನು ಮತ್ತು ತಾಯತವನ್ನು ನೋಡಿ ಸಾಕ್ಷಿಯು ಗುರುತಿಸಿದ್ದು, ಅದನ್ನು ಮು.ಮಾ.2 ಮತ್ತು ಮು.ಮಾ.3 ಎಂದು ಗುರುತಿಸಲಾಯಿತು).

9. ಶವವನ್ನು ಹೊರತೆಗೆಯುವ ಕಾಲಕ್ಕೆ ಫೋಟೋಗಳನ್ನು ತೆಗೆಯಲಾಯಿತು. ಸದರಿ ಫೋಟೋಗಳನ್ನು ಈಗ ಗುರುತಿಸುತ್ತಿದ್ದೇನೆ. (ಸಾಕ್ಷಿಯು ಗುರುತಿಸಿದ ಎರಡು ಫೋಟೋಗಳನ್ನು ಆರೋಪಿತರ ಪರ ವಕೀಲರ ತಕರಾರಿಗೆ ಒಳಪಡಿಸಿ ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು). ನಿಪಿ-4 ಫೋಟೋವಿನಲ್ಲಿ ನನ್ನ ಭಾವಚಿತ್ರ ಇದೆ.

**ಪಾಟೀ ಸವಾಲು:**

1ನೇ ಆರೋಪಿಯ ಪರ ವಕೀಲರು ಶ್ರೀ ಬಿಎಂಎಲ್‌ಜಿ ವಕೀಲರು ಈ ದಿನ ವಕಾಲತ್‌ನ್ನು ಸಲ್ಲಿಸಿರುವ ಕಾರಣ ಪಾಟೀ ಸವಾಲಿಗಾಗಿ ಕಾಲಾವಕಾಶವನ್ನು ಕೇಳುತ್ತಿದ್ದಾರೆ. ಜೊತೆ ಕಲಂ 309 ದಂಡ ಪ್ರಕ್ರಿಯಾ ಸಂಹಿತೆ ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ನಮೂದಿಸಿರುವ ಕಾರಣಗಳಿಗಾಗಿ ಪಾಟೀ ಸವಾಲಿಗಾಗಿ ಕಾಲಾವಕಾಶವನ್ನು ನೀಡಲಾಗಿದೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು.)

ಓ.ಹೇ.ಕೇ.ಸ.ಇ.ಎ.ಒ.

Sd/-

**(ಬಿ.ನಂದಕುಮಾರ್)**

**2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**

**ಚಿಕ್ಕಮಗಳೂರು.**

**ಪಿ.ಡಬ್ಲ್ಯೂ:-1**

***ದಿ:27.04.2016 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು***

***ಪಾಟೀ ಸವಾಲು ಶ್ರೀ ಬಿಎಂಎಲ್‌ಜಿ ವಕೀಲರಿಂದ: 1ನೇ ಆರೋಪಿತನ ಪರವಾಗಿ::-***

*10.* ಚಿಕ್ಕಮಗಳೂರು ಜಿಲ್ಲೆಯಲ್ಲಿ ಎರಡು ಕಂದಾಯ ಉಪವಿಭಾಗಗಳು ಇವೆ ಎಂದರೆ ಸರಿ. ಅವು ಚಿಕ್ಕಮಗಳೂರು ಮತ್ತು ತರೀಕೆರೆ ಎನ್ನುವುದು ಸರಿ. ಚಿಕ್ಕಮಗಳೂರು ಉಪವಿಭಾಗಕ್ಕೆ ಮೂಡಿಗೆರೆ, ಕೊಪ್ಪ, ಶೃಂಗೇರಿ ಮತ್ತು ಚಿಕ್ಕಮಗಳೂರು ತಾಲ್ಲೂಕು ಸೇರುತ್ತದೆ ಎಂದರೆ ಸರಿ. ತರೀಕೆರೆ ಉಪವಿಭಾಗಕ್ಕೆ ತರೀಕೆರೆ, ಎನ್.ಆರ್.ಪುರ ಮತ್ತು ಕಡೂರು ಸೇರುತ್ತದೆ ಎಂದರೆ ಸರಿ. ಆರೋಪಿ ಹೇಳಿದ ವಿಷಯವನ್ನು ನಾನು ಬರವಣಿಗೆ ಮೂಲಕ ಪಡೆದುಕೊಂಡಿಲ್ಲ ಮತ್ತು ರೆಕಾರ್ಡ್ ಮಾಡಿರುವುದಿಲ್ಲ. ಶವವನ್ನು ಹೊರತೆಗೆಯುವ ಸಮಯದಲ್ಲಿ ವೈದ್ಯರಿಗೆ ಹಾಜರಿರಬೇಕೆಂದು ಹೇಳಿದ್ದೆವು, ಅವರು ಬಂದಿದ್ದರು. ವೈದ್ಯರು ಆ ಸಮಯದಲ್ಲಿ ಇದ್ದ ಬಗ್ಗೆ ಮಹಜರ್‌ನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಗ್ರಾಮದ ಮುಖಂಡರನ್ನು ನಾನು ಕರೆದುಕೊಂಡು ಹೋಗಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಶವವನ್ನು ಹೊರತೆಗೆದ ಜಾಗದಲ್ಲಿ ಸುಮಾರು 10-20 ಜನ ಇದ್ದರು. ದೂರದಲ್ಲಿ ತುಂಬಾ ಜನ ಇದ್ದರು. ಶವ ತೆಗೆದ ಜಾಗ ಗಟ್ಟಿಹಳ್ಳ ನೀರು ಹರಿಯುವ ಜಾಗ ಎಂದರೆ ಸರಿ. ಶವವನ್ನು ಹೊರತೆಗೆದಾಗ ಅದನ್ನು ಗುರುತಿಸುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿ. ಶವದ ಕೆಳಭಾಗದಲ್ಲಿದ್ದ, ಎಡ ಮತ್ತು ಬಲಭಾಗದಲ್ಲಿದ್ದ ಮಣ್ಣನ್ನು ಶೇಖರಿಸಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಶವಪಂಚನಾಮೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಶವತನಿಖೆ ಆದ ಮೇಲೆ ಶವಪರೀಕ್ಷೆ ಮಾಡಿ ಮೂರು ದಿನದೊಳಗೆ ವರದಿ ನೀಡಬೇಕೆಂದು ನಾನು ಪೊಲೀಸರಿಗೆ ಲಿಖಿತವಾಗಿ ನಿರ್ದೇಶನ ನೀಡಿರುವುದಿಲ್ಲ.

*11.* ದಿ:26.10.2013 ರಂದು ಬೆಳಗ್ಗೆ 11 – 11:30 ಸಮಯಕ್ಕೆ ಸಖರಾಯಪಟ್ಟಣ ಪೊಲೀಸ್ ಠಾಣೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಸದರಿ ಠಾಣೆಯಲ್ಲಿ 1ನೇ ಆರೋಪಿಯು ಹಾಜರಿದ್ದು, ಆತನನ್ನು ಕೇಳಿದಾಗ ಆತ ಕೊಲೆ ಮಾಡಿ ಒಂದು ಹೆಣವನ್ನು ತನ್ನ ಜಮೀನಿನಲ್ಲಿ ಹೂತಿಟ್ಟಿರುವುದಾಗಿ, ಅಲ್ಲಿಗೆ ಕರೆದುಕೊಂಡು ಹೋದರೆ ಅದನ್ನು ತೋರಿಸುವುದಾಗಿ ಹೇಳಿಲ್ಲ ಎಂದರೆ ಸರಿಯಲ್ಲ. ಅದರಂತೆ ಆತನ ಜೊತೆ ನಾವು ಲಕ್ಯಾಹೋಬಳಿ ಅಂಚೆಹಳ್ಳಿ ಗ್ರಾಮದ 1ನೇ ಆರೋಪಿಯ ಜಮೀನಿನ ಹತ್ತಿರ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಹೂತಿಟ್ಟಿದ್ದ ಹೆಣವನ್ನು ಹೊರತೆಗೆಯುವ ಸಲುವಾಗಿ ಪೊಲೀಸರಿಗೆ ಪುರಸಭೆಯಿಂದ ಕಾರ್ಮಿಕರನ್ನು ಕರೆಸಲು

ತಿಳಿಸಿರಲಿಲ್ಲ ಎಂದರೆ ಸರಿಯಲ್ಲ. ಆದರಂತೆ ಕರೆಸಿರಲಿಲ್ಲ ಎಂದರೆ ಸರಿಯಲ್ಲ. ಊರಿನ ಮುಖಂಡರು ನಮ್ಮ ಜೊತೆ ಪಂಚರಾಗಿರಲಿಲ್ಲ ಎಂದರೆ ಸರಿಯಲ್ಲ. ಶವವನ್ನು ಹೊರತೆಗೆಯುವಾಗ ನಿಪಿ-2 ರಂತೆ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ.

12. ನಂತರ ಗ್ರಾಮಸ್ಥರೊಂದಿಗೆ ನಿಪಿ-3 ಪಂಚನಾಮೆಯನ್ನು ಸುಮಾರು 4:30 ವರೆಗೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-4 ಮತ್ತು 5 ರಂತೆ ಫೋಟೋ ತೆಗೆಸಿಲ್ಲ ಎಂದರೆ ಸರಿಯಲ್ಲ. ಶವಪಂಚನಾಮೆ ಪೂರ್ವದಲ್ಲಿ ಮೃತನ ತಂದೆ ಕೊಟ್ಟ ದೂರನ್ನು ಪರಿಶೀಲನೆ ಮಾಡಿರುವುದಿಲ್ಲ. ನಿಪಿ-2 ಮತ್ತು 3 ಮಹಜರ್‌ಗಳನ್ನು ನಮ್ಮ ಕಛೇರಿಯಲ್ಲಿ ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಮಾಡಲು ನನಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಹೆಚ್‌ಎಂಎಸ್ ವಕೀಲರಿಂದ: 2 ರಿಂದ 9ನೇ ಆರೋಪಿತರ ಪರವಾಗಿ::-**

13. ಶವವನ್ನು ಹೂತಿಟ್ಟ ಪ್ರದೇಶದ ಬಗ್ಗೆ ಕಂದಾಯ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ಚುರ್ಚೆಗುಡ್ಡ ಮೀಸಲು ಅರಣ್ಯ ಪ್ರದೇಶ ಎನ್ನುವುದು ನನಗೆ ಗೊತ್ತಿಲ್ಲ. ನಾನು ಸ್ಥಳದ ನಕಾಶೆಯನ್ನು ತಯಾರು ಮಾಡಿರುವುದಿಲ್ಲ. ಆ ಜಾಗ ಆರೋಪಿಗೆ ಸೇರಿದ ಜಾಗ ಅಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಪರ ಮಾಡಲಾದ ಪಾಟೀ ಸವಾಲನ್ನು ಉಳಿದ ಆರೋಪಿಗಳ ಪರವಾಗಿ ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆ: ಇಲ್ಲ**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು.)

ಓ.ಹೇ.ಕೇ.ಸ.ಇ.ಎ.ಒ.

Sd/-
**(ಡಿ.ಕಂಬೇಗೌಡ)**
**2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ಚಿಕ್ಕಮಗಳೂರು.**

ಪಿ.ಡಬ್ಲ್ಯೂ:-1